ಹಿಡಿದು ಕೊಡ್ತೀನಿ, ಗ್ಯಾರಂಟಿ... ಇವರೇ... ಬೇಕಿದ್ರೆ ನೋಡಿ....' ಎನ್ನುತ್ತಾ ತೊದಲಿದ. ನಿಧಾನವಾಗಿ ಹಿಂಸರಿಯುತ್ತ, ಮಗನೊಡನೆ ವಾದ ಮಾಡುತ್ತ ನಿಂತಿದ್ದ ಹೆಂಡತಿಯತ್ತ ತಿರುಗಿ, 'ಆ ನಾಯಿ ನನ್ ಮಗನ್ನ ಮನೆ ಒಳಗೆ ಕರ್ಕೊಂಡು ಹೋಗೇ...' ಎಂದು ಜೋರಾಗಿ ಚೀರಿದ.

★★★

ಘಟನೆ ನಡೆದು ಎರಡು ದಿನಗಳಾದರೂ ಗೋವಿಂದರಾಯ ಮನೆ ಬಿಟ್ಟು ಹೊರಗೆ ಹೋಗಿರಲಿಲ್ಲ. ಹೆಚ್ಚಿನ ವ್ಯವಹಾರಗಳನ್ನೆಲ್ಲ ಫೋನಿನಲ್ಲೇ ಮಾಡುತ್ತಾ ಮೈಗೆ ಹುಷಾರಿಲ್ಲವೆಂದು ತಿರುಗಾಟಗಳನ್ನು ತಪ್ಪಿಸಿಕೊಳ್ಳುತ್ತಿದ್ದ. ಆದಿನ ಸಂಜೆ ಕಾಫಿ ಕುಡಿದು ಟೀವಿ ನೋಡುತ್ತ ಕುಳಿತಿದ್ದ ಆತನಿಗೆ ಯಾವುದೋ ಅಪರಿಚಿತ ನಂಬರಿನಿಂದ ಫೋನ್ ಒಂದು ಬಂತು. ಫೋನ್ ಮಾಡಿದವ ತಾನು ಕೇರಳದ ಕಾಸರಗೋಡಿನಿಂದ ಕರೆ ಮಾಡುತ್ತಿರುವುದಾಗಿಯೂ, ಅದು ಹೇಗೋ ಅದೃಷ್ಟವಶಾತ್ ಯಾರದೋ ಮುಖಾಂತರ ಗೋವಿಂದರಾಯನ ನಂಬರ್ ಆತನಿಗೆ ದೊರಕಿರುವುದಾಗಿಯೂ, ಸಮಸ್ಯೆಯಲ್ಲಿರುವ ತನಗೆ ಗೋವಿಂದರಾಯನಿಂದ ಖಂಡಿತ ಸಹಾಯವಾಗುವುದೆಂದು ನಂಬಿರುವುದಾಗಿ ತಿಳಿಸಿದ. ಬೆಂಗಳೂರು ಸೇರಿದಂತೆ ಹಲವೆಡೆ ಸರ್ಕಾರಿ ಕೆಲಸದಲ್ಲಿ ಸೇವೆ ಸಲ್ಲಿಸಿ ನಿವೃತ್ತನಾದಮೇಲೆ ಮೂಲ ಊರಾದ ಕಾಸರಗೋಡಿನಲ್ಲಿ ನೆಲೆಸಿರುವುದಾಗಿ ಪರಿಚಯಿಸಿಕೊಂಡ.

'ಸರಿ ಏನು ವಿಷಯ ಹೇಳಿ' ಎಂದು ಗೋವಿಂದರಾಯ ಕೇಳುತ್ತಿರುವಂತೆ, ಆ ವ್ಯಕ್ತಿ ಮಾತು ಮುಂದುವರಿಸಿದ.

'ಸರ್... ಈಗ ನೀವಿರೋ ಮನೆಯ ಪಕ್ಕದ ಸೈಟು ನಂದು. ಸುಮಾರು ಮೂವತ್ತು ವರ್ಷಗಳ ಹಿಂದೇ ಬೆಂಗ್ಳೂರಲ್ಲಿ ಕೆಲಸ ಮಾಡುತ್ತಿರೋವಾಗ ಖರೀದಿಸಿದ್ದು. ನನ್ನದು ಒಂದು ಊರಿಂದ ಇನ್ನೊಂದು ಊರಿಗೆ ಟ್ರಾನ್ಸ್‌ಫರ್ ಕೆಲಸ ಆದ್ದರಿಂದ ಆ ಸೈಟಿನ ಬಗ್ಗೆ ಕಾಳಜಿ ತಗೋಳ್ದೇ ಹಾಗೇ ಬಿಟ್ಟಿದ್ದೆ... ಸೈಟಂತಾ ಒಂದು ಇದ್ರೆ, ನಂತ್ರ ಹೇಗೂ ಮಗಳಿಗೆ ಆಗುತ್ತಲ್ಲ ಎನ್ನೋ ಆಲೋಚನೆ ನಂದು. ಒಬ್ಬಳೇ ಮಗಳು ನನಗೆ, ಗಂಡು ಮಕ್ಕಳಿಲ್ಲ. ಆದರೆ ಈಗ ಬೇರೆನೇ ಆಗಿದೆ ನೋಡಿ.... ಈಗ ಅಲ್ಲಿ ಮನೆ ಕಟ್ಟಿಕೊಂಡಿದಾನಲ್ಲ, ಆ ವ್ಯಕ್ತಿ ನನಗೆ ಗೊತ್ತಿರುವವನೇ... ಸರ್... ಆದರೆ ಸೈಟು ಅವಂದಲ್ಲ... ಆತನ ಜೊತೆಯಿದ್ದಾಳಲ್ಲ, ಅವಳೂ ಆತನ ಹೆಂಡತಿಯಲ್ಲ. ನನ್ನ ಮಗಳ ಜೊತೆ ಐದಾರು ವರ್ಷ ಸಂಸಾರ ಮಾಡಿ, ಡೈವರ್ಸ್ ಕೊಟ್ಟು ಈಗ ಅವಳ್ಯಾರ್ದೋ ಜೊತೆ ವಾಸ ಮಾಡ್ತಿದಾನೆ ನೀಚ... ತುಂಬಾ ಕೆಟ್ಟ ಮನುಷ್ಯ ಸರ್ ಅವ್ನು. ಅವನ್‌ಜೊತೆ ನನ್ನ ಮಗಳು ಪಟ್ಟ ಪಾಡು ಅಷ್ಟಿಷ್ಟಲ್ಲ. ಈಗ ಮಗಳು ನನ್ನ ಜೊತೇನೇ ಇದಾಳೆ, ಎರಡು ವರ್ಷ ಆಯ್ತು...

ಏನೋ ಹಣೇಲಿತ್ತು, ಆಗೋಯ್ತು... ಹಳೇದನ್ನೆಲ್ಲಾ ಮರೆಯೋಣ ಅಂದ್ಕೊಂಡಿದ್ವು. ಸ್ವಲ್ಪ ದಿನದ ಹಿಂದೆ ಆ ಸೈಟನ್ನ ಮಗಳ ಹೆಸರಿಗೆ ಮಾಡ್ಬಿಡೋಣ ಎನ್ನೋ ಆಲೋಚನೆ ಬಂದು ನೋಡಿದ್ರೆ, ಕಾಗದ ಪತ್ರಗಳೇ ಕಾಣೆಯಾಗಿದ್ದವು! ಆ ವ್ಯಕಿಯೇ ಯಾವುದೋ ಸಂದರ್ಭದಲ್ಲಿ ಅದನ್ನು ಕದ್ದಿದ್ದಾನೆ ಅನ್ನೋದು ನಂಗೂ ನನ್ ಮಗಳಿಗೂ ಪಕ್ಕಾ ಆಯ್ತು. ನಂತ್ರ ಯಾರ್ಯಾರನ್ನೋ ಹಿಡಿದು ಹೇಗೋ ಕಂಡು ಹಿಡಿದರೆ, ವಿಷ್ಯ ಗೊತ್ತಾಗಿ ನಮಗೆ ದೊಡ್ಡ ಶಾಕ್ ಆಗೋಯ್ತು... ಸರ್!... ವರ್ಷದ ಹಿಂದೆ ನನ್ನ ಆ ಸೈಟು ಮಾರಾಟಕ್ಕಿದೆ ಎಂಬ ಸುದ್ದಿ ಬಿದ್ದಿತ್ತಂತೆ. ಯಾರೋ ಕಿಡಗೇಡಿಗಳ ಕೆಲಸ; ಬೆಂಗ್ಳೂರಲ್ಲಿ ನಡ್ಯೋ ವಿಷ್ಯ ನಿಮಗೆ ಗೊತ್ತೇ ಇದೆಯಲ್ಲ. ಈ ಸುಳ್ಳು ಸುದ್ದಿಯ ಲಾಭ ಪಡೆದು ಆ ಸೈಟನ್ನು ಲಪಟಾಯಿಸಿ ಬಿಟ್ಟಿದ್ದಾನೆ ನೋಡಿ